ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಳಗಾವಿ ಜಿಲ್ಲೆಯಲ್ಲಿರುವ ಚಿಕ್ಕ ಮತ್ತು ಅತಿಚಿಕ್ಕ ಹಿಡುವಳಿದಾರರ ಸಂಖ್ಯೆ ಗುರುತಿಸಲಾಗಿದೆಯೇ?

ಆ) ಹಾಗಿದ್ದಲ್ಲಿ ಅವರಿಗೆ ಸರ್ಕಾರಿ ಸಹಾಯಧನದ ಪಾಸ್‌ಬುಕ್ ವಿತರಿಸಲಾಗಿದೆಯೆ?

ಇ) ಈ ಯೋಜನೆಯಲ್ಲಿ ಪ್ರಯೋಜನ ಪಡೆದ ಫಲಾನುಭವಿಗಳ ಸಂಖ್ಯೆ ಎಷ್ಟು?

ಶ್ರೀ ಎನ್ ಹುಚ್ಚಮಾಸ್ತಿಗೌಡ. (ಕೃಷಿ ಸಚಿವರು)

ಗುರುತಿಸಲಾಗಿದೆ.

ವಿತರಿಸಲಾಗುತ್ತಿದೆ.

ಜುಲೈ 1993ರ ಅಂತ್ಯದವರೆಗೆ 13,373 ಫಲಾನುಭವಿಗಳು ಪ್ರಯೋಜನ ಪಡೆದಿರುತ್ತಾರೆ.

ವಿಷಯ : - ಚನ್ನಪಟ್ಟಣ ಉಪ-ನೋಂದಣಾಧಿಕಾರಿ ಕಛೇರಿಯಲ್ಲಿ ಸರಿಯಾದ ಸಿಬ್ಬಂದಿ ಇಲ್ಲದೆ ಇರುವ ಬಗ್ಗೆ.

ಚುಕ್ಕೆ ಗುರ್ತಿಲ್ಲದ ಪ್ರಶ್ನೆ ಸಂಖ್ಯೆ 375(417)

ಶ್ರೀ ಸಾಧತ್ ಆಲೀಖಾನ್ (ಚನ್ನಪಟ್ಟಣ)

ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

(ಅ) ಚನ್ನಪಟ್ಟಣ ಉಪ-ನೋಂದಣಾಧಿಕಾರಿ ಕಛೇರಿಯಲ್ಲಿ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿ ಎಷ್ಟು.(ಹುದ್ದೆವಾರು ಮಾಹಿತಿ ಒದಗಿಸುವುದು)

(ಆ) ಹಾಗಿದ್ದರೆ, ಕಳೆದ ಎರಡು ವರ್ಷಗಳಿಂದ ಚನ್ನಪಟ್ಟಣ ಉಪ-ನೋಂದಣಾಧಿಕಾರಿಗಳ ಕಛೇರಿಗೆ ಅವಶ್ಯ ಸಿಬ್ಬಂದಿಯನ್ನು ನೇಮಿಸದಿರುವುದು ನಿಜವೇ.

(ಇ) ಹಾಗಿದ್ದಲ್ಲಿ, ಕಾರಣ ತಿಳಿಸಿ.

(ಈ) ಚನ್ನಪಟ್ಟಣ ಉಪ-ನೋಂದಣಾಧಿಕಾರಿಗಳ ಕಛೇರಿಯಲ್ಲಿ ನೋಂದಾಯಿಸಿದ ದಸ್ತಾವೇಜುಗಳನ್ನು ನೋಂದಣಿ ಅಂಚೆ ಮೂಲಕ ಹಿಂದಿರುಗಿಸಲು 6 ತಿಂಗಳು ವಿಳಂಬವಾಗಿರುವುದು ನಿಜವೇ. ಹಾಗಿದ್ದಲ್ಲಿ, ಅದಕ್ಕೆ ಕಾರಣ.

(ಉ) ಉಪ-ನೋಂದಣಾಧಿಕಾರಿ ಮತ್ತು ಅವಶ್ಯ ಸಿಬ್ಬಂದಿ ವರ್ಗವನ್ನು ನೇಮಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು ಮತ್ತು ತೆಗೆದುಕೊಂಡಿದ್ದರೆ ಯಾವಾಗ?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು)

1. ಹಿರಿಯ ಉಪ-ನೋಂದಣಾಧಿಕಾರಿ -1,
2. ಪ್ರಥಮ ದರ್ಜೆ ಸಹಾಯಕರು -1,
3. ದ್ವೀತೀಯ ದರ್ಜೆ ಸಹಾಯಕರು -1,
4. ಆಟೆಂಡರ್ -1,
5. ಮಿತವೇತನ ಪದವೀಧರರು -1,
6. ಜವಾನ -1

ಅವಶ್ಯ ಸಿಬ್ಬಂದಿಯನ್ನು 1993ನೇ ಸಾಮಾನ್ಯ ವರ್ಗಾವಣೆ ಅವಧಿಯಲ್ಲಿ ನೇಮಿಸಿದೆ. ಒಂದು ದ್ವಿತೀಯ ದರ್ಜೆ ಸಹಾಯಕರ ಹುದ್ದೆ ಬಿಟ್ಟು.

ಉದ್ಭವಿಸುವುದಿಲ್ಲ.

ದಿನಾಂಕ: 31-7-93ಕ್ಕೆ 650 ದಸ್ತಾವೇಜುಗಳು ನಕಲು ಮಾಡಲು ಬಾಕಿ ಉಳಿದಿವೆ. ಇನ್ನೂ ಹೆಚ್ಚಿನ ಸಿಬ್ಬಂದಿಯನ್ನು ನಿಯೋಜಿಸಿ ದಸ್ತಾವೇಜುಗಳನ್ನು ಶೀಘ್ರವಾಗಿ ಹಿಂದಿರುಗಿಸಲು ಕ್ರಮ ಕೈಗೊಳ್ಳಲಾಗುವುದು.

ಉಪ-ನೋಂದಣಾಧಿಕಾರಿಯನ್ನು ಈಗಾಗಲೇ ವರ್ಗಾಯಿಸಿ ನೇಮಿಸಿದ್ದು, ಅವರು ದಿನಾಂಕ: 26-8-93ರಿಂದ ಕಾರ್ಯ ನಿರ್ವಹಿಸುತ್ತಿರುತ್ತಾರೆ. ಇನ್ನುಳಿದ ದ್ವಿತೀಯ ದರ್ಜೆ ಸಹಾಯಕರ ಹುದ್ದೆಯನ್ನು ಶೀಘ್ರದಲ್ಲಿಯೇ ತುಂಬಲಾಗುವುದು.

ವಿಷಯ: - ರಾಜ್ಯದ ತೋಟಗಾರಿಕೆ ಉತ್ಪನ್ನಗಳನ್ನು ಹೊರದೇಶಗಳಿಗೆ ಕಳುಹಿಸುವ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 377(414)

ಶ್ರೀ ಸಾದತ್ ಆಲಿಖಾನ್(ಚನ್ನಪಟ್ಟಣ)

ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದ ತೋಟಗಾರಿಕೆ ಉತ್ಪನ್ನಗಳನ್ನು ಹೊರದೇಶಗಳಿಗೆ ಕಳುಹಿಸಲು ಸರ್ಕಾರ ಏನಾದರೂ ಕ್ರಮ ಕೈಗೊಂಡಿದೆಯೆ?

ಆ) ಹಾಗಿದ್ದಲ್ಲಿ ಕಾರ್ಯಕ್ರಮಗಳ ವಿವರಗಳೇನು?

ಇ) ಇಲಾಖೆಯು 1991-92, 92-93ರಲ್ಲಿ (ವರ್ಷಾವಾರು) ಹೊರದೇಶಗಳಿಗೆ ರಫ್ತು ಮಾಡಿದ ಉತ್ಪನ್ನಗಳ ವಿವರಗಳು.

ಶ್ರೀ ಎ. ಕೃಷ್ಣಪ್ಪ (ತೋಟಗಾರಿಕೆ ರಾಜ್ಯ ಸಚಿವರು)

ಇಲ್ಲ. ಆದರೆ ಸಹಕಾರ ಸಂಘಗಳ ವ್ಯಾಪ್ತಿಯಲ್ಲಿ ಬರುವ ಹಾಪ್‌ಕಾಮ್ಸ್ ರಾಜ್ಯದಿಂದ ತೋಟಗಾರಿಕೆ ಉತ್ಪನ್ನಗಳನ್ನು ಹೊರದೇಶಗಳಿಗೆ ರಫ್ತು ಮಾಡುವ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

ಹಾಪ್‌ಕಾಮ್ಸ್ ಸಂಸ್ಥೆಯು ರಫ್ತಿಗೆ ಬೇಕಾದ ಲೈಸೆನ್ಸ್ ಆರ್.ಬಿ.ಐ. ಕೋಡ್ ನಂ. ಮತ್ತು ಆಪೇಡಾದೊಂದಿಗೆ ನೋಂದಣಿ ಪಡೆದಿದೆ. ರಫ್ತಿಗೆ ಅಗತ್ಯವಿರುವ ಮೂಲಭೂತ ಸೌಕರ್ಯಗಳ ಕೊರತೆಯಿಂದ ಯಾವುದೇ ಉತ್ಪನ್ನಗಳನ್ನು ಈವರೆಗೆ ರಫ್ತು ಮಾಡಲಾಗಿರುವುದಿಲ್ಲ.

ರಫ್ತಿಗೆ ಅಗತ್ಯವಿರುವ ಮೂಲ ಸೌಕರ್ಯಗಳಾದ ಪ್ರಿ - ಕೂಲಿಂಗ್ ಘಟಕ, ಫ್ರಿಫ್ಯಾಬ್ರಿಕೇಟೆಡ್ ಶೀತಲಗೃಹಗಳು, ಮಧ್ಯಂತರ ಶೀತಲಗೃಹಗಳು, ಶೀತಲ ವ್ಯವಸ್ಥೆ ಹೊಂದಿದ ವಾಹನಗಳು ಮತ್ತು ಆವಾಹಕ ಕವಚ ವಾಹನಗಳನ್ನು ಕೊಳ್ಳಲು ರೂ.1474.91 ಲಕ್ಷಗಳ ಯೋಜನೆಯ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದೆ. ಅಲ್ಲದೆ ಸಂಘವು ರಾಜ್ಯ ಟ್ರೇಡಿಂಗ್ ನಿಗಮದ ಮೂಲಕ ಮಲೇಷಿಯಾಕ್ಕೆ ದಾಳಿಂಬೆ ಹಣ್ಣುಗಳನ್ನು ಹಾಗೂ ಗುಜರಾತ್ ರಫ್ತು ನಿಗಮದ ಮೂಲಕ ದಾಳಿಂಬೆ ಮತ್ತು ಸೀಬೆಹಣ್ಣುಗಳ ಮಾದರಿಗಳನ್ನು ಇಂಡೋನೇಷಿಯಕ್ಕೆ ಕಳುಹಿಸಿದೆ. ಎಸ್.ಟಿ.ಸಿ.ಯವರ ಮೂಲಕ ದಿನಾಂಕ 31-8-93ರಂದು 500 ಕೆ.ಜಿ. ದಾಳಿಂಬೆ ಹಣ್ಣುಗಳನ್ನು ಮಲೇಷಿಯಾಕ್ಕೆ ರಫ್ತು ಮಾಡಲಾಗುವುದು. ದಿನಾಂಕ 29-8-93ರಂದು ಗ್ಲೋಬಲ್ ಜನರಲ್ ಟ್ರೇಡಿಂಗ್ ದುಬೈ ಇವರಿಗೆ 13 ಟನ್ ದ್ರಾಕ್ಷಿ ಹಾಗೂ 5 ಟನ್ ದಾಳಿಂಬೆ ಮತ್ತು 1ಟನ್ ಟೊಮ್ಯಾಟೊ ರಫ್ತು ಮಾಡಲಾಗಿದೆ.